ಕರೆ ಗಂಟೆ ಬಾರಿಸಿತು. ರಂಗ ಎದ್ದು ಬಾಗಿಲು ತೆರೆದ. ಬಂದವರು ಒಳಗೆ ಬರಲು ಮುಂದಾದಾಗ 'ನಿಮ್ಮ ಹೆಸರು?' ಎಂದು ಕೇಳಿದ.

ಬಂದವರು 'ಜಗನ್ನಾಥ್' ಎಂದರು.

'ಒಂದು ನಿಮಿಷ ಇಲ್ಲೇ ಇರಿ. ಕೇಳಿಕೊಂಡು ಬರುತ್ತೇನೆ' ಎಂದು ಒಳಗೆ ಹೋಗಿ ಬಂದು 'ಬನ್ನಿ' ಎಂದು ಹೇಳಿ ಭೂಪತಿಯ ಕೋಣೆಯ ಬಳಿ ಬಿಟ್ಟು ಬಂದ. ಪುನಃ ಎಂದಿನಂತೆ ಬಾಗಿಲ ಬಳಿಯ ಚಿಕ್ಕ ಸ್ಟೂಲಿನಲ್ಲಿ ಕುಳಿತ. ಕೆಲವು ದಿನಗಳಿಂದ ರಂಗನಿಗೆ ಇದೇ ಕೆಲಸವಾಗಿತ್ತು. ಭೂಪತಿ ವಿಪರೀತ ಬೆನ್ನು ನೋವೆಂದು ಆಸ್ಪತ್ರೆಗೆ ದಾಖಲಾಗಿದ್ದ. ಆಸ್ಪತ್ರೆಗೆ ಬರಲು ಯಾರಿಗೂ ಅನುಮತಿ ಇರಲಿಲ್ಲ. ಹಾಗಾಗಿ ಆಸ್ಪತ್ರೆಯಿಂದ ಮನೆಗೆ ಬಂದ ಬಳಿಕ ಭೂಪತಿಯ ಆರೋಗ್ಯ ವಿಚಾರಿಸಿಕೊಂಡು ಹೋಗಲು ಜನರ ದಂಡೇ ಬರುತ್ತಿತ್ತು. ಆಸ್ಪತ್ರೆಯಲ್ಲಿರುವಾಗ ಭೂಪತಿಯ ಕೋಣೆಯಲ್ಲಿ ಹಗಲಿಗೊಂದು, ರಾತ್ರಿಗೊಂದು ಪ್ರತ್ಯೇಕ ದಾದಿಯರಿದ್ದು ಅವರು ಇಪ್ಪತ್ತನಾಲ್ಕು ಗಂಟೆಯೂ ಭೂಪತಿಯ ಸೇವೆಗೆ ಸದಾ ಸಿದ್ಧವಿರುವಂತೆ ನೋಡಿಕೊಳ್ಳಲಾಗಿತ್ತು. ಮನೆಯ ಸದಸ್ಯರಿಗೆ ಯಾವ ರೀತಿಯ ತೊಂದರೆಯೂ ಇರಲಿಲ್ಲ. ಹೀಗಿದ್ದೂ ಲಂಡನಿನಲ್ಲಿರುವ ಭೂಪತಿಯ ಮಗ ಎರಡು ದಿನಗಳ ಮಟ್ಟಿಗೆ ಬಂದು ಹೋದ. ಮಗಳು ನ್ಯೂಜಿಲಂಡಿನಿಂದ ಬಂದು ಒಂದು ವಾರ ವಿದ್ದಳು. ಕೆಲಸದ ಒತ್ತಡದ ನಡುವೆ ಬರುವುದು ಬೇಡವೆಂದು ಹೇಳಿದರೂ ಕೇಳದೆ ಭೂಪತಿಯಿಂದ ಉಪಕೃತನಾಗಿದ್ದ ಅವನ ಅಣ್ಣನ ಮಗ ದೆಹಲಿಯಿಂದ ವಿಮಾನದಲ್ಲಿ ಬಂದು, ಮರುದಿನವೇ ವಾಪಾಸಾಗಿದ್ದ. ಹೀಗೆ ದೂರ ದೂರದ ಊರುಗಳಿಂದ ಯಾರು ಯಾರೋ ಬಂದರು ಹೋದರು. ಆಸ್ಪತ್ರೆಯಿಂದ ಮನೆಗೆ ಬಂದ ಬಳಿಕ ಈಗ ಇಲ್ಲಿರುವವರ ಸರದಿ. ಮುಂಜಾನೆ ಹತ್ತು ಗಂಟೆಯಿಂದ ಮಧ್ಯಾಹ್ನ ಹನ್ನೆರಡು ಗಂಟೆಯವರೆಗೆ ಮತ್ತು ಸಾಯಂಕಾಲ ಐದು ಗಂಟೆಯಿಂದ ಏಳು ಗಂಟೆಯವರೆಗೆ ಯಾರಾದರೊಬ್ಬರು ಬರುತ್ತಲೇ ಇರುತ್ತಾರೆ. ಅವರು ಬಂದು ಹೋದ ನಂತರ ರಂಗ ಪುನಃ ಕೋಣೆಗೆ ಹೋಗಿ ಅವರು ತಂದಿರುವ ಹಣ್ಣುಗಳನ್ನು ತೆಗೆದುಕೊಂಡು ಹೋಗಿ ಅಡಿಗೆ ಕೋಣೆಯಲ್ಲಿ ಎತ್ತಿಡುತ್ತಾನೆ. ಆ ಹಣ್ಣುಗಳೋ ನಿಧಾನವಾಗಿ ಕೊಳೆತು ಹೋಗುತ್ತವೆ. ಎಲ್ಲರೂ ಭೂಪತಿಯ ಹೆಂಡತಿ ಪದ್ಮಳಿಗೆ ಹೆದರುತ್ತಾರೆ. ಅಡಿಗೆಯ ಹೆಂಗಸು 'ಹಣ್ಣನ್ನು ಏನು ಮಾಡುವುದು?' ಎಂದು ಪದ್ಮಳನ್ನು ಕೇಳಿದರೆ 'ಈಗಲೇ ಏನವಸರ?' ಎನ್ನುತ್ತಾಳೆ. ' ಹಣ್ಣುಗಳು ಕೊಳೆತು ಹೋದುವು' ಎಂದರೆ 'ಮೊದಲೇ ಹೇಳಲು ಏನಾಗಿತ್ತು?' ಎಂಬ ಮಾತು ಪದ್ಮಳಿಂದ ಬರುತ್ತದೆ.

ಮನೆಗೆ ಬರುವವರ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಆದರೂ ರಂಗ ಬಾಗಿಲ ಬಳಿಯೇ ಕುಳಿತಿದ್ದಾನೆ. ಗಿಡಗಳಿಗೆ ನೀರು ಹಾಕಲು ಹೋಗುವುದೋ ಬೇಡವೋ ಎಂಬ ಯೋಚನೆ ಅವನದು. ಅದೇ ಸಮಯದಲ್ಲಿ ಯಾರಾದರೂ ಬಂದರೆ? ಪದ್ಮ ಮಹಡಿಯ ಕೋಣೆಯಲ್ಲಿರುತ್ತಾಳೆ. ಒಮ್ಮೆ ಹೀಗೇ ರಂಗ ಎಲ್ಲೋ ಹೋಗಿದ್ದಾಗ ತಾನು ಮಹಡಿಯಿಂದ ಇಳಿದು ಬಂದು ಬಾಗಿಲು ತೆರೆಯ ಬೇಕಾಯಿತೆಂದು ಪದ್ಮ ಅವನನ್ನು ಗದರಿದ್ದಳು. ಕುಳಿತಲ್ಲಿಯೇ ರಂಗನ ಮನಸ್ಸು ಭೂಪತಿಯ ಕಡೆಗೆ ವಾಲಿತು. ಎಷ್ಟೊಂದು ಪುಣ್ಯವಂತರು ನನ್ನ ಯಜಮಾನರು. ಕಣ್ಣ ರೆಪ್ಪೆಯಂತೆ ಎಲ್ಲರೂ ಅವರನ್ನು ನೋಡಿಕೊಳ್ಳುತ್ತಿದ್ದಾರೆ. ಎಲ್ಲದಕ್ಕೂ ಪಡೆದು  ಬಂದಿರಬೇಕು. ಅವರ ಪೂರ್ವ ಜನ್ಮದ ಸುಕೃತ ಇದಾಗಿದ್ದಿರಬಹುದು ಅಥವಾ ಇದೇ ಜನ್ಮದ್ದೂ ಇರಬಹುದು. ಅದೆಷ್ಟು ಜನಕ್ಕೆ ಸಹಾಯ ಮಾಡಿದ್ದಾರೋ? ಇನ್ನೂ ಮಾಡುತ್ತಲೇ ಇದ್ದಾರೆ ಎಂದು ಯೋಚಿಸುತ್ತಿದ್ದ ರಂಗ ಯಾರದೋ ಹೆಜ್ಜೆ ಸದ್ದಿಗೆ ಎಚ್ಚೆತ್ತ.

'ಏನೋ ರಂಗಣ್ಣ ಇನ್ನೂ ಇಲ್ಲೇ ಕುಳಿತಿದ್ದಿ? ಗಂಟೆ ಹನ್ನೆರಡಾಯಿತು. ಇನ್ನು ಯಾರೂ ಬರುವುದಿಲ್ಲ ಬಿಡು' ಎಂದಳು ಅಡಿಗೆಯ ಹೆಂಗಸು ಪಾರ್ವತಿ. ನಂತರ ರಂಗನ ಸಮೀಪ ಬಂದು ಮೆಲ್ಲನೆ 'ಸ್ವಲ್ಪ ಹಣ್ಣು ಮನೆಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ಇಲ್ಲವಾದರೆ ಅವು ಕೊಳೆತು ಹೋಗುತ್ತವೆ. ನೀನೂ ಸ್ವಲ್ಪ ತಿನ್ನು' ಎಂದು ಹೇಳಿ ನಂತರ ಗಟ್ಟಿಯಾಗಿ 'ಅಡಿಗೆ ಕೆಲಸ ಮುಗಿಯಿತು ರಂಗಣ್ಣ ಬರುತ್ತೇನೆ' ಎಂದು ಹೇಳಿ ಹೋದಳು. ಸ್ವಲ್ಪ ಹೊತ್ತಿನಲ್ಲಿ ಪದ್ಮ ಮಹಡಿಯಿಂದ ಇಳಿದು ಬಂದಳು. ಭೂಪತಿಯ ಕೋಣೆಗೆ ಬಂದು 'ಇಂದು ನಮ್ಮ ಸಂಘದಲ್ಲಿ ವಾರ್ಷಿಕ ಸಭೆ ನಡೆಯುತ್ತದೆ .ನೀವು ಬೇಡ ಎಂದರೆ ನಾನು ಹೋಗುವುದಿಲ್ಲ' ಎಂದಳು.

'ಧಾರಾಳವಾಗಿ ಹೋಗು. ಎರಡು ದಿನಗಳ ಹಿಂದೆ ನನಗೂ ತುರ್ತು ಕೆಲಸವಿತ್ತು. ವೈದ್ಯರು ಹೇಳಿದ್ದಾರೆಂದು ನೀವೆಲ್ಲಾ ನಾನು ಹೊರಗೆ ಹೋಗುವುದನ್ನು ತಡೆದಿರಿ. ವೈದ್ಯರು ಹೇಳಿದಂತೆ ಇನ್ನೂ ಎರಡು ದಿನ ಹೀಗೆ ಮಲಗಿಕೊಂಡೇ ಇರಬೇಕಲ್ಲಾ. ನಂತರ ಒಂದು ವಾರ ಮನೆಯಲ್ಲೇ ನಡೆದಾಡ ಬೇಕು. ಬಳಿಕ ಹೊರಗೆ ಕಾಲಿಡಬಹುದೆಂದು ಹೇಳಿದ್ದಾರೆ. ಆ ದಿನಕ್ಕಾಗಿ ಕಾಯುತ್ತಿದ್ದೇನೆ' ಎಂದ ಭೂಪತಿ.

'ಸರಿ, ನಾನು ಹೋಗಿ ಬರುತ್ತೇನೆ. ಆಗಲೇ ತಡವಾಗಿ ಹೋಗಿದೆ' ಎಂದು ಹೇಳುತ್ತಾ ಪದ್ಮ ಬಾಗಿಲ ಬಳಿ ಬಂದು, 'ರಂಗ ನಾನು ಊಟಕ್ಕಿಲ್ಲ. ಒಂದು ಗಂಟೆಗೆ ಸರಿಯಾಗಿ ಸಾಹೇಬರಿಗೆ ಊಟ ಬಡಿಸು' ಎಂದು ಹೇಳಿ ಹೊರಟು ಹೋದಳು.

ರಂಗ ಭೂಪತಿಯ ಕೋಣೆಯ ಬಳಿ ಬಂದು 'ಏನಾದರೂ ಬೇಕೇ ಸ್ವಾಮಿ?' ಎಂದು ಕೇಳಿದ.

'ಈಗ ಏನೂ ಬೇಡ ರಂಗ. ಇಂದು ಸ್ವಲ್ಪ ಬೇಗನೇ ಊಟ ಮಾಡುತ್ತೇನೆ' ಉತ್ತರಿಸಿದ ಭೂಪತಿ.

ರಂಗ ಕೋಣೆಯಿಂದ ನಿರ್ಗಮಿಸಿ ತನ್ನ ಕೋಣೆಯ ಬಳಿ ಬಂದ. ಅಲ್ಲಿ ಲಕ್ಷ್ಮಿ ಬಟ್ಟೆ ಒಗೆಯುತ್ತಿದ್ದಳು. ಇವಳೂ ತನ್ನ ಕೆಲಸ ಮುಗಿಸಿ ಹೊರಟ ನಂತರ ಯಜಮಾನರಿಗೆ ಬಡಿಸಬೇಕು ಎಂದುಕೊಂಡ. ಅಲ್ಲಿವರೆಗೆ ಸ್ವಲ್ಪ ಅಡ್ಡಾಗುವ ಎಂದು ತನ್ನ ಚಾಪೆ ಹಾಸಿದ. ಭೂಪತಿಯ ಅನಾರೋಗ್ಯದ ಸಮಯದಲ್ಲಿ ರಾತ್ರಿ ರಂಗ ಭೂಪತಿಯ ಕೋಣೆಯಲ್ಲಿ ಮಲಗುತ್ತಾನೆ. ಭೂಪತಿ ಎದ್ದು ಏನಾದರೂ ಕೇಳಿದರೆ ಎಂದು ಅವನು ಆದಷ್ಟೂ ಎಚ್ಚರವಾಗಿರಲು ಬಯಸುತ್ತಾನೆ. ಹಾಗಾಗಿ ಅವನಿಗೆ ಹಗಲಿನಲ್ಲಿ ಕಣ್ಣು ಎಳೆಯುತ್ತಿರುತ್ತದೆ. ರಂಗ ಹಳ್ಳಿಯಲ್ಲಿದ್ದವನು. ಅವನ ಇಡೀ ಕುಟುಂಬ ಇತರರ ತೋಟ, ಗದ್ದೆಗಳಲ್ಲಿ ಕೆಲಸ ಮಾಡುವವರು. ರಂಗ ಒಮ್ಮೆ ತೆಂಗಿನ ಮರದಿಂದ ಕಾಯಿ ಕೀಳುತ್ತಿರುವಾಗ ಆಯ ತಪ್ಪಿ ಕೆಳಗೆ ಬಿದ್ದು ಬಿಟ್ಟ. ಅಂದಿನಿಂದ ಎಷ್ಟು ಪ್ರಯತ್ನಪಟ್ಟರೂ, ಮೈ ಬಗ್ಗಿ ಕೆಲಸ ಮಾಡುವ ಚೈತನ್ಯ ಅವನ ದೇಹಕ್ಕೆ ಬರಲೇ ಇಲ್ಲ.

ಸುಮ್ಮನೆ ಕೂತರೆ ಆಗುತ್ತದೆಯೇ? ಕುಟುಂಬ ನಡೆಯಬೇಕಲ್ಲ? ಅಲ್ಲದೆ ಹೈಸ್ಕೂಲ್ ಓದುತ್ತಿರುವ ಮಕ್ಕಳನ್ನು ಮುಂದಿನ ವರ್ಷ ಕಾಲೇಜಿಗೆ ಸೇರಿಸಬೇಕೆಂಬ ಇರಾದೆಯೂ ರಂಗನ ಕುಟುಂಬಕ್ಕೆ ಇದೆ. ಏನಾದರೂ ಕೆಲಸ ಮಾಡಿ ಸಂಪಾದನೆ ಮಾಡಬೇಕೆಂಬ ರಂಗನ ಇಚ್ಛೆ ಕೊನೆಗೂ ಕೈಗೂಡಿತು.

ಭೂಪತಿಯ ಮನೆಗೊಬ್ಬ ನಂಬಿಕೆಯ ಆಳು ಬೇಕಾಗಿತ್ತು. ಮನೆಯ ಸದಸ್ಯರು ಸದಾ ಮನೆಯಲ್ಲಿರುವುದಿಲ್ಲ. ಮನೆಗೆ ಬಂದು ಹೋಗುವ ಆಳುಕಾಳುಗಳ ಮೇಲೆ ನಿಗಾ ಇಟ್ಟುಕೊಂಡು ,ಇತರ ಸಣ್ಣ ಪುಟ್ಟ ಕೆಲಸ ಮಾಡಿಕೊಂಡಿರಲು ರಂಗನ ನೇಮಕವಾಯಿತು. ರಂಗನಿಗೆ ಇದು ತುಂಬಾ ಅನುಕೂಲವಾಯಿತು.

ನಗರಗಳಲ್ಲಿ ಏನು ಕೆಲಸ ಮಾಡಿಕೊಂಡಿದ್ದರೂ ಉಳಕೊಳ್ಳಲು ಒಂದು ನೆಲೆ ಅಂತ ಬೇಕಲ್ಲಾ. ರಂಗನ ವಾಸ, ಊಟ ತಿಂಡಿ ಎಲ್ಲಾ ಮನೆಯಲ್ಲೇ ಆಗುವುದ ರಿಂದ ಅವನ ಸಂಬಳದ ಪೂರ್ತಿ ಹಣ ಉಳಿತಾಯವಾಗುತ್ತಿತ್ತು. ತನಗೊಂದು ನೆಲೆ ಒದಗಿಸಿ ಕೊಟ್ಟ ಯಜಮಾನರು ಬೇಗ ಗುಣಮುಖರಾಗಿ, ಸದಾ ಕಾಲ ಚೆನ್ನಾಗಿರಲಿ ಎಂದು ರಂಗ ಯಾವಾಗಲೂ ಬೇಡುತ್ತಿರುತ್ತಾನೆ. ಈಗಲೂ ಅವನು ಮಲಗಿಕೊಂಡು ಯಜಮಾನರು ಚೆನ್ನಾಗಿರಲಿ, ನನ್ನನ್ನು ಇಲ್ಲಿ ತಂದು ಸೇರಿಸಿದ ಆ ಮಹನೀಯರ ಹೊಟ್ಟೆಯೂ ತಣ್ಣಗಿರಲಿ ಎಂದು ಜಪ ಎಂಬಂತೆ ಮನಸ್ಸಿನಲ್ಲಿ ಹೇಳುತ್ತಾ ಹೋದ.

'ನಿದ್ದೆ ಬಂತೇನೋ ರಂಗಣ್ಣ. ನನ್ನ ಕೆಲಸ ಮುಗಿಯಿತು. ನಾನು ಹೋಗುತ್ತಿದ್ದೇನೆ. ಬಾಗಿಲು ಹಾಕಿಕೋ' ಎಂಬ ಲಕ್ಷ್ಮಿಯ ಗಟ್ಟಿ ದನಿಗೆ ರಂಗನಿಗೆ ಎಚ್ಚರವಾಯಿತು. ದಡಬಡಿಸಿ ಎದ್ದು ಲಕ್ಷ್ಮಿಯ ಹಿಂದೆ ಹೋದ. ನಂತರ ಭೂಪತಿಯ ಕೋಣೆಗೆ ಬಂದು 'ಸ್ವಾಮಿ' ಎಂದು ಮೆಲ್ಲನೆ ಕರೆದ. ಭೂಪತಿಗೆ ನಿದ್ದೆ ಬಂದಿತ್ತು. ಅಡಿಗೆಯನ್ನು ಬಿಸಿ ಮಾಡಿ ತಟ್ಟೆಗೆ ಬಡಿಸಿ ಕೋಣೆಗೆ ತಂದ. ಭೂಪತಿ ಪ್ರತಿ ಬಾರಿ ಆಹಾರ ತೆಗೆದು ಕೊಳ್ಳುವಾಗಲೂ ರಂಗ ಅಲ್ಲೇ ಕುಳಿತಿರುತ್ತಾನೆ. ಏನಾದರೂ ಬೇಕಿದ್ದರೆ ತಂದು ಬಡಿಸುತ್ತಾನೆ. ನಂತರ ರಂಗನ ಊಟ. ಅವನಿಗೆ ಮನೆಯಲ್ಲಿ ಪೂರ್ತಿ ಸ್ವಾತಂತ್ರ್ಯವಿತ್ತು. ಏನು ಬೇಕಾದರೂ ತಿನ್ನಬಹುದಿತ್ತು. ಅಲ್ಲಿ ಅಡುಗೆಯವಳು ಮಾಡಿರುವ ಬಗೆ ಬಗೆಯ ವ್ಯಂಜನಗಳಿರುತ್ತವೆ. ಆದರೆ ಅವನು ಅನ್ನದ ಮೇಲೊಂದಿಷ್ಟು ಸಾರು ಹಾಕಿ ಕೊಂಡು ತನ್ನ ಊಟ ಮುಗಿಸುತ್ತಾನೆ. ಉಳಿದ ಅಡುಗೆಯನ್ನು ಅಡಿಗೆಯವಳು ತನ್ನ ಮನೆಗೆ ತೆಗೆದುಕೊಂಡು ಹೋಗುತ್ತಾಳೆ.

'ನೀನೂ ಸ್ವಲ್ಪ ತಗೋಬಾರದೇನೋ ರಂಗಣ್ಣ?' ಎಂದು ಅಡಿಗೆಯವಳು ಕೇಳಿದರೆ 'ಬಡವ ನೀನು ಮಡಗಿದ ಹಾಗೆ ಇರು' ಎಂಬಂತೆ ಇರುವುದು ನನ್ನ ಅಭ್ಯಾಸ. ಇಲ್ಲಿರುವ ಆಹಾರ ತಿಂದು ನನ್ನ ನಾಲಗೆ ಅದಕ್ಕೆ ಹೊಂದಿಕೊಂಡರೆ ,